(ಈ ಹಂತದಲ್ಲಿ ಮಾನ್ಯ ಕಾಂಗ್ರೆಸ್ ಪಕ್ಷದ ಸದಸ್ಯರು ಸಭಾತ್ಯಾಗ ಮಾಡಿದರು)

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಅಧ್ಯಕ್ಷರೇ ಪಾನ ನಿರೋಧ ಸಂಪೂರ್ಣವಾಗಿ ಜಾರಿಗೆ ತರಬೇಕೆಂದು ನಾನು ಸರ್ಕಾರವನ್ನು ನೇರವಾಗಿ ಒತ್ತಾಯ ಮಾಡಿದೆ, ಅದನ್ನು ತರುವುದಕ್ಕೆ ಸಾಧ್ಯವಿಲ್ಲವೆಂದು ನಮ್ಮ ಮಾನ್ಯ ಮುಖ್ಯಮಂತ್ರಿಗಳು ದೇಶ ವಿದೇಶಗಳ ವಿಚಾರಗಳನ್ನು ಹೇಳಿ ಈ ಬಗ್ಗೆ ನಮ್ಮ ನಿಲುವನ್ನು ಅವರು ಒಪ್ಪುತ್ತಾ, ಇಲ್ಲ. ನಾನು ಮತ್ತೊಮ್ಮೆ ಅವರನ್ನು ಪಾನನಿರೋಧ ಜಾರಿಗೆ ತಗೊಂಡು ಬಂದು, ಗಾಂಧೀಜಿಯವರ ಒಂದು ತತ್ವ ನೀತಿಗೆ ತಾವು ಬದ್ದರಾಗಬೇಕೆಂದು ತಮ್ಮಲ್ಲಿ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

ಶ್ರೀ ಜೆ.ಹೆಚ್. ಪಟೇಲ್ : ಗಾಂಧೀಜಿಯವರು ಇದ್ದ ಕಾಲದಲ್ಲೇ ಸಂಪೂರ್ಣವಾಗಿ ಈ ಪಾನ ನಿರೋಧ ಮಾಡಲು ಆಗಲಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಅವರೇ ಒಂದು ಕಡೆ ಹೇಳಿದ್ದಾರೆ ನಾನು ಅಧಿಕಾರಕ್ಕೆ ಬಂದರೆ ಮೊಟ್ಟಮೊದಲನೆಯದಾಗಿ ಮಾಡತಕ್ಕಂಥ ಕೆಲಸ ಎಂದರೆ ಪಾನನಿರೋಧ ಜಾರಿಗೆ ತರುವುದು.

ಶ್ರೀ ಜೆ.ಹೆಚ್. ಪಟೇಲ್ : ಅದಕ್ಕೇ ಅವರು ಅಧಿಕಾರಕ್ಕೇ ಬರಲೇ ಇಲ್ಲ.

ಶ್ರೀ ವಾಟಾಳ್ ನಾಗರಾಜ್ : ಆ ವಿಚಾರ ಬೇರೆ, ನಾನು ತಮ್ಮಲ್ಲಿ ಮತ್ತೊಮ್ಮೆ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ. ಸಂಪೂರ್ಣ ಪಾನ ನಿರೋಧ ಜಾರಿಗೆ ಆಗಬೇಕೆಂದು ನನ್ನ ಒತ್ತಾಯಕ್ಕೆ ತಾವು ಬೆಂಬಲ ಕೊಡಲಿಲ್ಲವೆಂದು ನಾನು ಸಭಾತ್ಯಾಗ ಮಾಡುತ್ತಿದ್ದೇನೆ.

(ಮಾನ್ಯ ಸದಸ್ಯರು ಸಭಾತ್ಯಾಗ ಮಾಡಿದರು.)

ಶ್ರೀ ಎಂ. ನಿವಾಸ : ಮಾನ್ಯ ಅಧ್ಯಕ್ಷರೇ ಸರ್ಕಾರದ ಬೊಕ್ಕಸಕ್ಕೆ ನಷ್ಟ ಎಂಎಸ್ಐಎಲ್ ಸಂಸ್ಥೆಯವರು ಮಾರಾಟ ಮಾಡತಕ್ಕ ವ್ಯವಸ್ಥೆಯನ್ನು ತಪ್ಪಿಸಿ ನೀತಿಯನ್ನು ಬದಲಾವಣೆ ಮಾಡಿದ್ದರಿಂದ ಸರ್ಕಾರದ ಬೊಕ್ಕಸಕ್ಕೆ ನಷ್ಟವಾಗುತ್ತದೆ, ಆದ್ದರಿಂದ ಈ ಮಾರಾಟದ ವ್ಯವಸ್ಥೆಯನ್ನು ಎಂಎಸ್ಐಎಲ್ ಗೆ ನೀಡಬೇಕು, ಎಂಬ ನಮ್ಮ ಬೇಡಿಕೆಗೆ ಸರ್ಕಾರ ಒಪ್ಪುತ್ತಿಲ್ಲವೆಂದೂ ನಾನೂ ಕೂಡ ಪ್ರತಿಭಟಿಸಿ ಸಭಾತ್ಯಾಗ ಮಾಡುತ್ತೇನೆ

(ಮಾನ್ಯ ಸದಸ್ಯರು ಸಭಾತ್ಯಾಗ ಮಾಡಿದರು.)

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ (ಪಾಂಡವಪುರ) : ಮಾನ್ಯ ಅಧ್ಯಕ್ಷರೇ ಮಾನ್ಯ ಮುಖ್ಯಮಂತ್ರಿಗಳು ಅರ್ಧ ಪಾನ ನಿರೋಧ ಮಾಡುವ ಬಗ್ಗೆ ಮತ್ತು ಹಳ್ಳಿಗಳಲ್ಲಿನ ಆರೋಗ್ಯದ ಬಗ್ಗೆ ಹೇಳಿದ್ದಾರೆ, ಬಹಳ ಗಂಭೀರವಾಗಿ ತಾವು ಚರ್ಚೆ ಮಾಡಿ ಯೋಚನೆ ಮಾಡಬೇಕು, ಅರ್ಧ ಪಾನ ನಿರೋಧ ಮಾಡುವುದು ಮೂಲಕ ಈಗಾಗಲೇ 6 ತಿಂಗಳಲ್ಲಿ ಹೋಗುವವನು 3 ತಿಂಗಳಲ್ಲಿ ಹೋಗತಕ್ಕಂತಹ ಪರಿಸ್ಥಿತಿ ಸೃಷ್ಟಿಯಾಗಿದೆ. ಈಗ ಬಾಟ್ಲಿಂಗ್ ವ್ಯವಸ್ಥೆ ಯಾವ ಮಟ್ಟಕ್ಕೆ ಸೃಷ್ಟಿಯಾಗಿದೆ ಎಂದರೆ ಹರ್ಕ್ಯೂಲಸ್, ಯುಲಿಸಿಸ್ ಸ್ಯಾಮ್ಸನ್ ಇಪ್ಪತ್ತು ರೂಪಾಯಿ ಬಾಟ್ಲಿಂಗ್ ವ್ಯವಸ್ಥೆಯಾಗಿ ಇವೊತ್ತು ಹಳ್ಳಿಯಲ್ಲಿ ಓಡಾಡುತ್ತಿವೆ. ಒಂದು ಹೋಗಿ ಇನ್ನೊಂದು ಬರುತ್ತಿದೆ. ಆರು ತಿಂಗಳು ಜಾಕಿ ಎಂದು, ಈ ರೀತಿ ಎಲ್ಲಾ

ತರಹ ಡ್ರಿಂಕ್ಸ್‌ಗಳಿಗೆ ಕಲರ್ ಕೊಟ್ಟು ಕೊಟ್ಟು ಎಲ್ಲಾ ಹಳ್ಳಿಯಲ್ಲಿ ಓಡಾಡತಕ್ಕಂಥ ವ್ಯವಸ್ಥೆಯಾಗಿದೆ. ಆದುದರಿಂದ ಪೂರ್ಣ ಪಾನ ನಿರೋಧವನ್ನು ಮಾಡಿದರೆ, ಮಾತ್ರ ಹಳ್ಳಿಗಳು ಉದ್ಧಾರ ಆಗುವುದಕ್ಕೆ ಸಾಧ್ಯವಾಗುತ್ತದೆಯೇ ಹೊರತು ಅರ್ಧ ಮಾಡಿದರೆ ಆಗುವುದಿಲ್ಲ. ಮತ್ತು ಆರು ತಿಂಗಳಲ್ಲಿ ಸಾಯುವವನು ಮೂರು ತಿಂಗಳಿಗೆ ಹೋಗುತ್ತಾನೆ. ಆ ಪರಿಸ್ಥಿತಿ ಸೃಷ್ಟಿಯಾಗುತ್ತದೆ. ಆದುದರಿಂದ ದಯವಿಟ್ಟು ಸರ್ಕಾರ ಪೂರ್ಣ ಪಾನ ನಿರೋಧದ ಬಗ್ಗೆ ಗಂಭೀರವಾಗಿ ಚಿಂತನೆ ಮಾಡಬೇಕು. ಮತ್ತು ಖಾಸಗಿಯವರಿಗೆ ಕೊಡುವ ಬದಲು ಎಂ.ಎಸ್.ಐ.ಎಲ್.ಗೆ ಮುಂದುವರೆಸತಕ್ಕಂಥ ವ್ಯವಸ್ಥೆಗೆ ಸರ್ಕಾರ ಬದ್ಧವಾಗಿರಬೇಕೆಂದು ಹೇಳಿ, ಈ ಎರಡೂ ನೀತಿಗೆ ಸರ್ಕಾರ ಬದ್ಧವಾಗಿಲ್ಲದೇ ಇರುವುದರಿಂದ ನಾನು ಕೂಡ ವಿರುದ್ಧ ಮಾಡಿ ಸಭಾತ್ಯಾಗವನ್ನು ಮಾಡುತ್ತೇನೆ.

(ಈ ಸಂದರ್ಭದಲ್ಲಿ ಶ್ರೀ ಕೆ.ಎಸ್. ಪುಟ್ಟಣ್ಣಯ್ಯನವರು ಸಭಾತ್ಯಾಗ ಮಾಡಿದರು.)

ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಶ್ರೀ ಎಂ.ಸಿ. ನಾಣಯ್ಯ (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮತ್ತು ವಾರ್ತಾ ಮತ್ತು ಪ್ರಚಾರ ಇಲಾಖೆಯ ಸಚಿವರು) : ಮಾನ್ಯ ಉಪ ಮುಖ್ಯಮಂತ್ರಿಗಳ ಪರವಾಗಿ ಭಾರತ ಸಂವಿಧಾನದ 151 (2)ನೇ ಅನುಚ್ಛೇದದ ಮೇರೆಗೆ ಭಾರತ ನಿಯಂತ್ರಕ ಹಾಗೂ ಮಹಾಲೇಖಾಪಾಲಕ ರವರು ಕರ್ನಾಟಕ ಸರ್ಕಾರದ 1996ನೇ ಸಾಲಿನ ಮಾರ್ಚ್ 31ಕ್ಕೆ ಕೊನೆಗೊಂಡ ರಾಜಸ್ವ ಆದಾಯ (ನಂ.2)ಕ್ಕೆ ಸಂಬಂಧಿಸಿದ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು : ಮಂಡಿಸಲಾಯಿತು.

ಅಧ್ಯಕ್ಷರು : ಈಗ ಶೂನ್ಯ ವೇಳೆಯನ್ನು ಕೈ ಬಿಡಲಾಗಿದೆ. ನಾವು ಇನ್ನೂ ಆರು ಗಂಟೆಯವರೆಗೆ ಕುಳಿತುಕೊಂಡರೂ ಕೂಡ ನಾಡಿದ್ದುವರೆಗೆ ಕೇವಲ 440 ನಿಮಿಷಗಳು ಉಳಿಯುತ್ತವೆ ನಾವು ರಾಜ್ಯಪಾಲರ ಭಾಷಣದ ಬಗ್ಗೆ ಚರ್ಚೆ ಮುಗಿಸಬೇಕಾದರೆ. ಈಗಾಗಲೇ 40 ಜನರ ಹೆಸರಿನ ಪಟ್ಟಿಯನ್ನು ಕೊಟ್ಟಿದ್ದೀರಿ. ಇದುವರೆಗೆ ಬಿ.ಜೆ.ಪಿ.ಯ ಮೂರು ಜನ ಮಾತನಾಡಿ, 240 ನಿಮಿಷ ತೆಗೆದುಕೊಂಡಿದ್ದಾರೆ. ಕಾಂಗ್ರೆಸ್ಸಿನವರು ಮೂರು ಜನ ಮಾತನಾಡಿ, 85 ನಿಮಿಷ ತೆಗೆದುಕೊಂಡಿದ್ದಾರೆ. ಅವರಿಗೆ ಇನ್ನೂ ಹೆಚ್ಚಿನ ಕಾಲಾವಕಾಶ ಕೊಡಬೇಕಾಗಿದೆ. ಜನತಾದಳದವರು ಕೇವಲ 38 ನಿಮಿಷ ತೆಗೆದುಕೊಂಡಿದ್ದಾರೆ. ಇನ್ನು ಕೆಲವರಿಗೆ ಅವಕಾಶವನ್ನು ಮಾತನಾಡುವುದಕ್ಕೆ ಮಾಡಿಕೊಡಬೇಕಾಗಿದೆ. 11.10ಕ್ಕೆ ಪ್ರಾರಂಭವಾದ ನಿಲುವಳಿ ಸೂಚನೆಯ ಚರ್ಚೆ ಮುಗಿಯಲು 12.30 ಗಂಟೆಯಾಯಿತು. ಅದಕ್ಕೂ ಅವಕಾಶ ಕೊಟ್ಟು, ನಿಯಮ 69ಕ್ಕೂ ಅವಕಾಶ ಕೊಟ್ಟು, ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಚರ್ಚೆಗೂ ಅವಕಾಶ ಕೊಟ್ಟರೆ, 27ನೇ ತಾರೀಖು ಮಾನ್ಯ ಮುಖ್ಯಮಂತ್ರಿಗಳಿಂದ ಉತ್ತರ ಕೊಡಿಸುವುದು ಸಾಧ್ಯವಾಗದೇ ಇರತಕ್ಕಂಥ ಕೆಲಸ. ಇವೊತ್ತು ಶೂನ್ಯವೇಳೆ ತೆಗೆದುಕೊಂಡರೆ, ಇಲ್ಲಿ ಹದಿನಾರು ಜನರ ಪಟ್ಟಿ ಇದೆ. ಒಬ್ಬರಿಗೆ ಅವಕಾಶ ಕೊಟ್ಟು ಇನ್ನೊಬ್ಬರಿಗೆ ಅವಕಾಶ ಕೊಡದೇ ಇರುವುದು ಸಾಧುವಲ್ಲ. ಆ ಕಾರಣದಿಂದ ಇಂದು ಶೂನ್ಯ ವೇಳೆ ಮತ್ತು ನಿಯಮ 69 ಕೆಳಗೆ ಇರುವ